## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | : | 1042 (1063) |
| ಸದಸ್ಯರ ಹೆಸರು | : | ಶ್ರೀ ಎಸ್ ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 17.03.2025. |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಒಂದನೇ ತರಗತಿಗೆ ಸೇರಲು ಜೂನ್ 1, 2025ಕ್ಕೆ 06 ವರ್ಷ ಕಡ್ಡಾಯವಾಗಿ ತುಂಬಿರಬೇಕು ಎಂಬ ನಿಯಮದಿಂದ 05 ಲಕ್ಷಕ್ಕೂ ಮಿಗಿಲಾದ ಮಕ್ಕಳು ಶಾಲಾ ಶಿಕ್ಷಣದಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರಿಂದ 2019, ಜೂನ್‌ತಿಂಗಳ 30 ರೊಳಗೆ 06 ವರ್ಷ ತುಂಬುವ ಮಕ್ಕಳು ಒಂದನೇ ತರಗತಿ ಸೇರಲು ಒಂದು ವರ್ಷ ಕಾಯುವ ಪ್ರಮೇಯ ಬಂದಿರುವ ಕುರಿತು ಸರಕಾರದ ನಿಲುವೇನು; | ಆರ್.ಟಿ.ಇ ಕಾಯಿದೆ 2009 ಮತ್ತು ಕಡ್ಡಾಯ ಶಿಕ್ಷಣ ನಿಯಮಗಳು 2012ರಂತೆ ಶೈಕ್ಷಣಿಕ ವರ್ಷದ ಜೂನ್ ಒಂದನೇ ತಾರೀಖಿಗೆ ಕಡ್ಡಾಯವಾಗಿ 06 ವರ್ಷಗಳು ಪೂರ್ಣಗೊಂಡಿರುವ ಮಗುವನ್ನು ಒಂದನೇ ತರಗತಿಗೆ ದಾಖಲಿಸಲು ವಯೋಮಿತಿಯನ್ನು ಆದೇಶ ಸಂಖ್ಯೆ: ಇಪಿ 260 ಪಿಜಿಸಿ 2021 ದಿನಾಂಕ: 26-07-2022 ಹಾಗೂ ತಿದ್ದುಪಡಿ ಸಂಖ್ಯೆ : ಇಪಿ 387 ಪಿಜಿಸಿ 2022 ದಿನಾಂಕ 15-11-2022 ರಂತೆ ನಿಗದಿಪಡಿಸಲಾಗಿದ್ದು, ಪ್ರಸ್ತುತ ಸದರಿ ಆದೇಶವನ್ನು ಪಾಲಿಸಲಾಗುತ್ತಿದೆ. |
| ಆ) | 06 ವರ್ಷ ಕಡ್ಡಾಯ ಎಂಬ ಕಾನೂನು 2022ರ ನವೆಂಬರ್‌ತಿಂಗಳಿನಿಂದ ಜಾರಿಗೆ ಬಂದಿದ್ದು ಅದಕ್ಕಿಂತ ಮೊದಲು ಹುಟ್ಟಿದ ಮಕ್ಕಳಿಗೆ ಅವರು ಮಾಡದ ತಪ್ಪಿಗೆ ಈ ಕಾನೂನು ಅನ್ವಯಿಸುವುದು ಸರಿಯೇ; ಈಗ 2019, ಜೂನ್‌ತಿಂಗಳಿನಲ್ಲಿ ಹುಟ್ಟಿಗ ಮಕ್ಕಳಿಗೆ ಅನ್ಯಾಯವಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ; ಈ | ಬಂದಿದೆ.<br>ಸರ್ಕಾರದ ಆದೇಶ ಸಂಖ್ಯೆ:ಇಪಿ 260 ಪಿಜಿಸಿ 2021 ದಿನಾಂಕ : 26-07-2022 ಹಾಗೂ ತಿದ್ದುಪಡಿ ಸಂಖ್ಯೆ: ಇಪಿ 387 ಪಿಜಿಸಿ 2022 ದಿನಾಂಕ:15-11-2022 ರನ್ವಯ 2023-24ನೇ ಸಾಲಿನಿಂದ ಎಲ್.ಕೆ.ಜಿ ತರಗತಿಗೆ ದಾಖಲಾತಿ ಹೊಂದಲು ಜೂನ್ 01ನೇ ತಾರೀಖಿಗೆ ಅನ್ವಯವಾಗುವಂತೆ 04 |

| | | |
|---|---|---|
| | ಕುರಿತು ಸರಕಾರದ ನಿಲುವೇನು; | ವರ್ಷಗಳ ವಯೋಮಿತಿಯನ್ನು ನಿಗಧಿಪಡಿಸಲಾಗಿರುತ್ತದೆ. ಪ್ರಸ್ತುತ ಸದರಿ ನಿಯಮವನ್ನು ಅನುಸರಿಸಲಾಗುತ್ತಿದೆ. ಸದರಿ ಆದೇಶದನ್ವಯ ಜೂನ್ 2019ರ ನಂತರ ಹುಟ್ಟಿದ ಮಕ್ಕಳು ದಾಖಲಾತಿಗೆ ನಿಗದಿತ ವಯೋಮಿತಿಯನ್ನು ಪೂರೈಸದ ಕಾರಣ 01ನೇ ತರಗತಿಯ ದಾಖಲಾತಿಗೆ ಅವಕಾಶವಿರುವುದಿಲ್ಲ.<br>ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅನುಸಾರ ಒಂದನೇ ತರಗತಿಗೆ ದಾಖಲಾಗುವ ಮಗುವು 6 ವರ್ಷ ವಯಸ್ಸನ್ನು ಪೂರ್ಣಗೊಳಿಸಿರುವುದು ಅಗತ್ಯವಾಗಿರುತ್ತದೆ. |
| ಇ) | ನವೆಂಬರ್, 2022ರ ಬಳಿಕ ಜನಿಸಿದ ಮಕ್ಕಳಿಗೆ ಮಾತ್ರವೇ 06 ವರ್ಷ ಕಡ್ಡಾಯ ಎಂಬ ನಿಯಮ ಜಾರಿಗೆ ತರುವ ಬಗ್ಗೆ ಸರಕಾರದ ನಿಲುವೇನು? (ವಿವರ ನೀಡುವುದು) | • ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅನುಸಾರ ಈ ಹಿಂದೆ ಇದ್ದ ಶಾಲಾ ಹಂತದ ಶಿಕ್ಷಣದ ಸಂರಚನೆ 10+2 ಅನ್ನು 5+3+3+4 ಎಂದು ಮಾರ್ಪಾಡು ಮಾಡಲಾಗಿರುತ್ತದೆ. ಅದರಂತೆ ಮೊದಲ ಹಂತದ 5 ವರ್ಷಗಳ ಶಿಕ್ಷಣ ಎರಡು ಹಂತಗಳನ್ನು ಒಳಗೊಂಡಿದ್ದು, 3–6 ವಯೋಮಾನದ ಮಕ್ಕಳು ಪೂರ್ವ ಬಾಲ್ಯಾವಸ್ಥೆಯ ಆರೈಕೆ ಮತ್ತು ಶಿಕ್ಷಣವನ್ನು ಅಂಗನವಾಡಿ / ಪೂರ್ವ ಪ್ರಾಥಮಿಕ ಶಾಲೆ/ ಬಾಲವಾಟಿಕಾದಲ್ಲಿ ಪಡೆಯುತ್ತಾರೆ.<br>• ತದನಂತರ 6–8 ವಯೋಮಾನದ ಮಕ್ಕಳು 1 ಮತ್ತು 2ನೇ ತರಗತಿ ಶಿಕ್ಷಣ ಪಡೆಯುತ್ತಾರೆ. ಈ ಎರಡು ಹಂತ ಒಟ್ಟಾರೆ ಮಗುವಿನ 3–8 ವಯೋಮಾನವನ್ನು ಒಳಗೊಂಡಿರುತ್ತದೆ. |

| | | |
|---|---|---|
| | | ಅದರಂತೆ 1ನೇ ತರಗತಿಗೆ ದಾಖಲಾಗುವ ಮಗುವು 6 ವರ್ಷ ಪೂರ್ಣಗೊಳಿಸಿರುವುದು ಕಡ್ಡಾಯವಾಗಿರುತ್ತದೆ.<br>• 1 ನೇ ತರಗತಿ ಪ್ರವೇಶಕ್ಕಾಗಿ ರಾಜ್ಯಾದ್ಯಂತ ಏಕರೂಪದ ವಯಸ್ಸಿನ ಮಾನದಂಡಗಳ ಅನುಷ್ಠಾನವನ್ನು ಪರಿಗಣಿಸಿ ನಿಯಮವನ್ನು ಜಾರಿಗೊಳಿಸಿದೆ.<br>• ದಿನಾಂಕ: 31-05-2019ರ ನಂತರ ಜನಿಸಿದ ಮಕ್ಕಳು ದಿನಾಂಕ: 01-06-2025ಕ್ಕೆ 6 ವರ್ಷ ಪೂರ್ಣಗೊಳಿಸುವುದಿಲ್ಲ. ಇಂಥಹ ಮಕ್ಕಳು ಒಂದು ವರ್ಷ ಪುನಃ ಹಿಂದಿನ ತರಗತಿಯಲ್ಲಿ(ಯು.ಕೆ.ಜಿ) ಉಳಿಯಬೇಕಾಗುತ್ತದೆ. ಇದರಿಂದ ಪಾಲಕರಿಗೆ ಆರ್ಥಿಕವಾಗಿ ಅನಗತ್ಯ ಹೊರೆ ಉಂಟಾಗುತ್ತದೆ. ಇದರಿಂದ ಮಕ್ಕಳ ನಿರಂತರ ಕಲಿಕೆಗೆ ಅಡಚಣೆಯುಂಟಾಗುತ್ತದೆ. ಆದ್ದರಿಂದ 2025-26ನೇ ಶೈಕ್ಷಣಿಕ ಸಾಲಿನಲ್ಲಿ 1ನೇ ತರಗತಿಗೆ ದಾಖಲಾಗುವ ಮಗುವು 6 ವರ್ಷ ಪೂರೈಸಿರಬೇಕೆಂಬ ನಿಯಮವನ್ನು ಸಡಿಲಗೊಳಿಸುವಂತೆ ಮನವಿಗಳು ಸ್ವೀಕೃತಗೊಂಡಿದ್ದು, ಪರಿಶೀಲನೆಯಲ್ಲಿವೆ. |

**ಸಂಖ್ಯೆ: ಇಪಿ 118 ಪಿಎಂಸಿ 2025**

**(ಎಸ್.ಮಧು ಬಂಗಾರಪ್ಪ)**

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು